ಎಲ್ಲ ಬಡವರ ಕಷ್ಟ ದೂರ ಮಾಡ್ತೇನೆ ಎಂದು ಘೋಷಿಸಿ, ಊರಿನ ಹತ್ತಾರು ಬಡ ಮಹಿಳೆಯರಿಗೆ ಕೆಲಸ ಕೊಟ್ಟರು. ಪ್ರತಿಯೊಬ್ಬರ ಮನೆಯಲ್ಲೂ ಹಪ್ಪಳ, ಉಪ್ಪಿನಕಾಯಿ ತಯಾರಿಸುತ್ತಿದ್ದ ಆ ದಿನಗಳಲ್ಲಿ ಇವರ ರೆಡಿಮೇಡ್ ಉತ್ಪನ್ನವನ್ನು ದುಡ್ಡು ಕೊಟ್ಟು ಕೊಳ್ಳುವವರಾದರೂ ಯಾರು? ದೂರದ ನಗರಗಳಿಗೆ ಇವನ್ನೆಲ್ಲ ಪ್ಯಾಕ್ ಮಾಡಿ ಕಳಿಸುವುದು ಈಗಿನಷ್ಟು ಸಲೀಸೂ ಆಗಿರಲಿಲ್ಲ. ಗೋದಾಮಿನಲ್ಲಿ ಇವರ ಉತ್ಪನ್ನಗಳು ರಾಶಿ ಬಿದ್ದು ಹೆಗ್ಗಣಗಳ ಪಾಲಾಯಿತೇ ಹೊರತು ಊರ ಜನ ಅವುಗಳನ್ನು ಮೂಸಿಯೂ ನೋಡಲಿಲ್ಲ!

ತಿಂಗಳಿಂದ ತಿಂಗಳಿಗೆ ಸಾಲದ ಭಾರ ಜಾಸ್ತಿಯಾಗುತ್ತ ಹೋಯಿತು. ಕೊನೆಗೊಂದು ದಿನ ರಾಜ್ಯ ಹಣಕಾಸು ನಿಗಮದ ಅಧಿಕಾರಿಗಳು ಪೈಮಾಮನ ಫ್ಯಾಕ್ಟರಿಗೆ ಬೀಗ ಜಡಿದರು.

ಇಷ್ಟಾಗಿಯೂ ಪೈಮಾಮ್ ಸುಮ್ಮನೆ ಕೂರುವ ಆಸಾಮಿಯೇ ಅಲ್ಲ. ಸೀದಾ ಲೋಕಸಭೆ ಚುನಾವಣೆಗೇ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿಬಿಟ್ಟರು! ತಮ್ಮ ಸೈಕಲ್‌ನ ಹಿಂದೆ ಮುಂದೆ ಚಿತ್ರವಿಚಿತ್ರ ಭಿತ್ತಿಪತ್ರ ಅಂಟಿಸಿಕೊಂಡು, ತಮ್ಮ ಚಿಹ್ನೆಯಾದ ಬಿಲ್ಲು ಬಾಣವನ್ನು ಹೆಗಲಿಗೇರಿಸಿಕೊಂಡು ಊರೂರ ಪರ್ಯಟಣೆಗಿಳಿದರು.



'ಒಂದು ಅವಕಾಶ ಕೊಟ್ಟು ನೋಡಿ ಮಾರಾಯರಾ, ಜಿಲ್ಲೆಯನ್ನು ರಾಮರಾಜ್ಯ ಮಾಡ್ತೇನೆ' ಎಂದು ಪೈಮಾಮ್ ಮಾಡುವ ಪ್ರಚಾರವೇ ಭಾಳ ತಮಾಷೆಯಾಗಿ ಕಾಣುತ್ತಿತ್ತು. ಜನ ಸೇರುವ ಪೇಟೆಗಳಲ್ಲಿ, ಸಂತೆಗಳ ಬಳಿ ಅವರ ಭಾಷಣ ಕಳೆಗಟ್ಟುತ್ತಿತ್ತು. ಭಾಷಣದ ಕೊನೆಯಲ್ಲಿ ಅವರು ಬಿಲ್ಲನ್ನು ಬಾಗಿಸಿ ಆಕಾಶದತ್ತ ಮುಖ ಮಾಡಿ ಬಾಣ ಬಿಡುವುದನ್ನು ನೋಡಲು ಪುಟ್ಟ ಮಕ್ಕಳು ತವಕದಿಂದ ಬಂದು ನಿಲ್ಲುತ್ತಿದ್ದರು. ಬಾಣ ಆಕಾಶಕ್ಕೆ ಚಿಮ್ಮಿದ್ದೇ ತಡ, ಶಿಳ್ಳೆ ಹೊಡೆದು ಸಂಭ್ರಮಿಸುತ್ತಿದ್ದರು.

ಪ್ರಚಾರದ ಕೊನೆಯ ದಿನ ಸಂಜೆ ಗಾಂಧಿಪುರದ ಗಾಂಧಿಕಟ್ಟೆಯ ಮೇಲೆ ನಿಂತು ಭರ್ಜರಿಯಾಗಿ ಭಾಷಣ ಆರಂಭಿಸಿದ ಪೈಮಾಮ್, ಕೊನೆಯಲ್ಲಿ ಎಂದಿನಂತೆ ಬಾಣ ಹೂಡಿ ಬಿಲ್ಲು ಬಾಗಿಸಿ, ಇದು ದಿಲ್ಲಿಯ ಕೆಂಪು ಕೋಟೆಯನ್ನು ಭೇದಿಸಲಿದೆ ನೋಡ್ತಾ ಇರಿ ಎಂದು ಬಾಣ ಬಿಟ್ಟೇ ಬಿಟ್ಟರು. ಪೈಮಾಮನ ಗ್ರಹಚಾರಕ್ಕೆ ಆ ಬಾಣ ಸೀದಾ ಹೋಗಿ, ರಸ್ತೆ ಪಕ್ಕ ನಿಂತಿದ್ದ ಪೊಲೀಸ್ ಜೀಪಿನ ಮುಂದಿನ ಗಾಜನ್ನೇ ತೂತು ಮಾಡಿ ಬಿಡಬೇಕೆ! ಸೈಕಲ್‌ನಲ್ಲಿ ಉಮೇದಿನಿಂದ ಬಂದಿದ್ದ ಪೈಮಾಮ್ ಪಾಪ! ಪೊಲೀಸ್ ಜೀಪಿನಲ್ಲಿ ಕೂತು ಸಪ್ಪೆ ಮೋರೆ ಹಾಕಿಕೊಂಡು ಹೋಗಬೇಕಾಯಿತು!

ಲೋಕಸಭೆ ಎಲೆಕ್ಷನ್‌ನಲ್ಲಿ ಠೇವಣಿ ಜಪ್ತಿಯಾದರೂ ಪೈಮಾಮನ ರಾಜಕೀಯ ತಲುಬು ಕಡಿಮೆಯಾಗಲಿಲ್ಲ. ಮಂಡಲ ಪಂಚಾಯಿತಿ ಚುನಾವಣೆಗೆ ನಿಂತರು. ಮನೆಮನೆಗೆ ತೆರಳಿ ವೋಟು ಕೇಳಿದರು. ಪಾಪ ಈ ಬಾರಿ ನಾವು ಪೈಮಾಮನನ್ನು ಗೆಲ್ಲಿಸಲೇಬೇಕು ಮಾರಾಯಾ ಎಂದು ಜನ ಮಾತನಾಡಿಕೊಂಡರು. ಈ ಸರ್ತಿ ಎಲೆಕ್ಷನ್‌ನಲ್ಲಿ ಬೇರೆ ಯಾರು ಗೆಲ್ತಾರೊ ಸೋಲ್ತಾರೊ... ಆದರೆ, ಪೈಮಾಮ್ ಗೆಲ್ಲೋದು ಮಾತ್ರ ಖರೆ ಎಂದು ಊರ ಜನ ಖಚಿತ ದನಿಯಲ್ಲಿ ಹೇಳತೊಡಗಿದರು.

ಮತದಾನಕ್ಕೆ ಒಂದು ದಿನವಷ್ಟೇ ಬಾಕಿ ಇತ್ತು. ನಮ್ಮ ಜನ ಈ ಸರಕಾರ ಕೊಡೋ ಪುಗಸಟ್ಟೆ ಪಡಿತರ ತಿನ್ನೋದನ್ನ ಬಿಡಬೇಕು, ಸ್ವಾವಲಂಬಿಯಾಗಿ ಸ್ವಾಭಿಮಾನದಿಂದ ಬದುಕೋದನ್ನ ಕಲಿಯಬೇಕು ಎಂದು ಪೈಮಾಮ್ ಪರಿಚಯದವರ ಬಳಿ ಲೋಕಾಭಿರಾಮವಾಗಿ ಹೇಳಿದ್ದಕ್ಕೆ ಉಪ್ಪು ಖಾರ ಹಾಕಿ ಎದುರಾಳಿ ಅಭ್ಯರ್ಥಿ ಗುಲ್ಲೆಬ್ಬಿಸಿದ. ಪೈಮಾಮ್ ಗೆದ್ದರೆ ರೇಷನ್ ಕಾರ್ಡನ್ನೇ ತೆಗೆದುಬಿಡ್ತಾರಂತೆ ಮಾರಾಯಾ ಎಂದು ರಾತ್ರೋರಾತ್ರಿ ಜನ ತಿರುಗಿ ಬಿದ್ದರು. ಪೈಮಾಮ್ ಪಂಚಾಯಿತಿ ಚುನಾವಣೆಯಲ್ಲೂ ಅವಮಾನಕಾರಿ ಸೋಲು ಕಂಡರು!